## ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 15-09-2022

### ಧನ್ನೂರಾ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 129/2022 ಕಲಂ 457, 380 ಐಪಿಸಿ :-

ದಿನಾಂಕ: 14/09/2022 ರಂದು 1700 ಗಂಟೆಗೆ ಫಿರ್ಯಾದಿ ಶ್ರೀ ಜಗನ್ನಾಥ ತಂದೆ ಕಲ್ಲಪ್ಪಾ ಬಶೇಟ್ಟೆ ವಯ: 41 ವರ್ಷ ಜಾತಿ: ಲಿಂಗಾಯತ ಉ: ಒಕ್ಕಲುತನ ಸಾ: ತರನಳ್ಳಿ ಇವರು ಠಾಣೆಗೆ ಹಾಜರಾಗಿ ದೂರು ನೀಡಿದರ ಸಾರಾಂಶವೆನೆಂದರೆ ಫಿರ್ಯಾದಿಯ ಅಕ್ಕಳಾದ ಶೋಭಾವತಿ ಗಂಡ ಸೂರ್ಯಕಾಂತ ಮುಸ್ತಾಪೂರೆ ವಯ: 45 ವರ್ಷ ಇವಳು ಬೀದರದಲ್ಲಿ ಇರುವ ತನ್ನ ಮಗಳ ಮನೆಗೆ ಹೋಗಿದಾಗ ರಾತ್ರಿ ವೇಳೆಯಲ್ಲಿ ಯಾರೋ ಅಪರಿಚಿತ ಕಳ್ಳರು ದಿನಾಂಕ: 13/09/2022 ರಂದು 0200 ಗಂಟೆ ಸುಮಾರಿಗೆ ಇವರ ಮನೆ ಬಾಗಿಲು ಕೊಂಡಿ ಮೂರಿದು ಅಲಮಾರಾದಲ್ಲಿ ಇದ್ದ ನಗದು ಹಣ 2000/- ರೂಪಾಯಿ ಮತ್ತು 5 ತೊಳಿ ಬೇಳ್ಳಿಯ ಲಕ್ಷ್ಮಿ ಮೂರ್ತಿ ಅಂ.ಕಿ. 2000/- ರೂಪಾಯಿ ಅಂತ ಒಟ್ಟು 4000/- ರೂಪಾಯಿ ಬೇಲೆ ನಗದು ಹಣ ಮತ್ತು ಬೇಳ್ಳಿ ಕಳ್ಳತನ ಮಾಡಿಕೊಂಡಿ ಹೊಗಿರುತ್ತಾರೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.